# ವಿಜಯದಾಸರ ಸಂಖ್ಯಾಶಾಸ್ತ್ರಮುಂದಿಗೆ

- ಡಾ || ಚತುರ್ವೇದಿ ವೇದವ್ಯಾಸಾಚಾರ್ಯ

ಹರಿದಾಸನಾಗಿ ಸಂಚರಿಸು ಸಂತೋಷದಲಿ
ಗುರುಹಿರಿಯರ ಪಾದಕ್ಕೆರಗು ಬಿಡದೆ ||

ಎರಡೊಂದು ತಿಳಿದು = (ಎರಡು + ಒಂದು = ಮೂರು). ಜ್ಞಾನ, ಭಕ್ತಿ ವೈರಾಗ್ಯ ತಿಳಿದು.

ಮತ್ತೆರಡೊಂದು ಅಳಿದು = ದಾರೇಷಣ, ಸುತೇಷಣ, ವಿತ್ತೇಷಣ ಈಷಣಾತ್ರಯವನ್ನು ನಾಶಮಾಡಿ.

ಎರಡೊಂದು ಸಂಪಾದಿಸಿ = ಶ್ರವಣ, ಮನನ, ನಿಧಿಧ್ಯಾಸನ ಸಂಪಾದಿಸಿ.

ಎರಡೊಂದು ಶುದ್ಧಿಯಲಿ = ಮನೋವಾಕ್ಕಾಯವೆಂಬ ತ್ರಿಕರಣ ಶುದ್ಧಿ ಮಾಡಿಕೊಂಡು.

ಎರಡೊಂದು ಸೈರಿಸುತ = ತಾಪತ್ರಯಗಳನ್ನು ಸಹಿಸುತ್ತಾ

ಎರಡೊಂದು ಕಾಲದಲಿ = ಪ್ರಾತಃ, ಮಧ್ಯಾಹ್ನ ಸಾಯಂ - ಕಾಲಗಳಲ್ಲಿ.

ಎರಡೊಂದು ಗುಣಗಳಿಗೆ = ಸತ್ವ, ರಜಸ್ಸು ತಮಸ್ಸು ಗುಣಗಳಿಗೆ.

ಎರಡೊಂದು ರೂಪನೆನೆದು = ವಿಶ್ವ, ತೈಜಸ, ಪ್ರಾಜ್ಞ ಎಂಬ ಜಾಗ್ರತ್, ಸ್ವಪ್ನ ಸುಷುಪ್ತಿಗಳಿಗೆ ನಿಯಾಮಕಗಳಾದ ರೂಪಗಳನ್ನು ನೆನೆದು.

ಎರಡೊಂದು ಲೋಕವನ್ನು = ಭೂಲೋಕ, ಸ್ವರ್ಗ, ಪಾತಾಳ ಲೋಕಗಳನ್ನು.

ಎರಡೊಂದು ಮಾಳ್ಪನ್ನ = ಸೃಷ್ಟಿ ಸ್ಥಿತಿ, ಸಂಹಾರ ಮಾಡುವ.

ಎರಡೊಂದು ಅವಸ್ಥೆಯಲಿ = ಜಾಗ್ರತ, ಸ್ವಪ್ನ ಸುಷುಪ್ತಿಗಳಲ್ಲಿ

ಎರಡೊಂದು ಕಾಯನೋಡು = ಸ್ಥೂಲ, ಸೂಕ್ಷ್ಮ ಸ್ವರೂಪ ದೇಹಗಳನ್ನು ನೋಡು.

ಎರಡೊಂದು ಕರ್ಮ ಕಳೆದು = ಸಂಚಿತ, ಆಗಾಮಿ, ಪ್ರಾರಬ್ಧ ಕಳೆದುಕೊಂಡು.

ಎರಡೊಂದು ಅಕ್ಷರಂಗಳ = ಅಕಾರ, ಉಕಾರ, ಮಕಾರಗಳ ಸಮಷ್ಟಿಯಾದ ಓಂಕಾರವನ್ನು.

ಎರಡೊಂದು ಕಾಲಗಳಲಿ ನೆನೆದು = ತ್ರಿಕಾಲಗಳಲ್ಲಿ ಜಪಿಸಿ.

ಎರಡೊಂದು ಸ್ಥಾನ ಸೇರು = ಶ್ವೇತದ್ವೀಪ, ಅನಂತಾಸನ, ವೈಕುಂಠ ಎಂಬ ತ್ರಿಧಾಮವನ್ನು ಸೇರು.

ಎರಡೊಂದು ಗುಣಪೂರ್ಣ = ಅಗ್ರೇಶ, ಮೂಲೇಶ, ಪ್ರಾದೇಶ ರೂಪಗಳನ್ನು ಭಜಿಸು.

ಮೂರೊಂದು ಯುಗದಲ್ಲಿ = ಮೂರು + ಒಂದು = ನಾಲ್ಕು : ಕೃತ, ತ್ರೇತಾ, ದ್ವಾಪರ, ಕಲಿ ಯುಗಗಳಲ್ಲಿ.

ಮೂರೊಂದು ವರ್ಣದ = ಬಿಳಿ, ಕೆಂಪು, ಹಳದಿ, ನೀಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪನಾಗಿ, ಅನುಗ್ರಹಿಸಲು ಅವತರಿಸುವವನು: ಮೋಕ್ಷ, ಸಂಹಾರ, ಸೃಷ್ಟಿ ಪಾಲನೆ.

**ಮೂರೊಂದು ಕಡೆ ಬಿಂಬ** = ಸ್ವರೂಪ, ಲಿಂಗ, ಸೂಕ್ಷ್ಮ ಮತ್ತು ಸ್ಥೂಲ ದೇಹಗಳಲ್ಲಿರುವವನು.

**ಮೂರೊಂದು ಆಗಿ ಭಜಿಸು** = ಸತ್, ಚಿತ್, ಆನಂದ, ಆತ್ಮಾ ಎಂದು ಚತುರ್ಗುಣದಿಂದ ಉಪಾಸನೆ ಮಾಡು.

**ಮೂರೊಂದು ಪುರುಷಾರ್ಥ** = ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ನೀಡುವವನು.

**ಮೂರೊಂದ್ಹಾದಿ ಬೇಡು** = ಸಾರೂಪ್ಯ, ಸಾಲೋಕ್ಯ, ಸಾಮೀಪ್ಯ, ಸಾಯುಜ್ಯ. ಇವುಗಳನ್ನೇ ಬೇಡು.

ಮೂರೊಂದು ಮೊಗನಯ್ಯ ವಿಜಯವಿಠಲರೇಯನ.

ನಾಲ್ಕು ಮುಖವುಳ್ಳ ಬ್ರಹ್ಮದೇವನ. ಅಯ್ಯನಾದ ವಿಜಯವಿಠಲನನ್ನು,

**ಮೂರೊಂದುಪಾಯದಲಿ** = ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ವೈರಾಗ್ಯಗಳಿಂದ ಅವನನ್ನು ತಿಳಿಯಬೇಕು.

**ಮೂರೊಂದು ಪ್ರಳಯ ಮಾಳ್ಪ** = ದಿನಪ್ರಲಯ, ಆತ್ಯಂತಿಕ ಪ್ರಲಯ, ಪ್ರಾಕೃತ ಪ್ರಲಯ, ನೈಮಿತ್ತಿಕ ಪ್ರಲಯಗಳನ್ನು ಮಾಡುವವನು ನಮ್ಮ ವಿಜಯವಿಠಲರೇಯನು.

**ನಾಲ್ಕೊಂದು ಭೇದವು ಆವಲ್ಲಿ ನಿಜವೆಂದು** = ಪಂಚಭೇದಗಳು ಆವಲ್ಲಿ = ಮೋಕ್ಷದಲ್ಲೂ ನಿಜವೆಂದು ತಿಳಿದು.

**ನಾಲ್ಕೊಂದಾತ್ಮಕವಾದ ಬ್ರಹ್ಮಾಂಡದಿ** = ಪಂಚಭೂತಾತ್ಮಕವಾದ ಬ್ರಹ್ಮಾಂಡದಲ್ಲಿ,

**ನಾಲ್ಕೊಂದು ಬಗೆಯ ಯೋಗ್ಯವಂತರು** = ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು, ಮನುಷ್ಯೋತ್ತಮರು ಮುಕ್ತಿಯೋಗ್ಯರೆಂದು ತಿಳಿದು.

**ನಾಲ್ಕೊಂದು ಸಂಪದವಿಷ್ಟಾವೆಂದು** = ಸಾಯುಜ್ಯ, ಸಾರ್ಷ್ಟಿ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಎಂಬ ಐದು ಮುಕ್ತಿ ಇವೆಯೆಂದು ತಿಳಿದು.

**ನಾಲ್ಕೊಂದು ಪರ್ವದಲಿ ತಿರುಗದಲೇ** = ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ, ಅಜ್ಞಾನಗಳಲ್ಲಿ ಬೀಳದೆ.

**ನಾಲ್ಕೊಂದು ಊರ್ಧ್ವಪುಂಡ್ರಮುದ್ರೆಗಳನೆ ಧರಿಸು** = (ಹನ್ನೆರಡು ನಾಮಗಳನ್ನು) ಮತ್ತು ಪಂಚಮುದ್ರೆಗಳನ್ನು ಧರಿಸು.

**ನಾಲ್ಕೊಂದು ಯಜ್ಞವ ತಿಳಿದು ಮಾಡು** = ಬ್ರಹ್ಮಯಜ್ಞ, ಪಿತೃ, ಪಾಠ, ವೈಶ್ವದೇವಾದಿಹೋಮ, ಅತಿಥಿಪೂಜೆ (ಪಾಠೋ, ಹೋಮಶ್ಚಾತಿಥೀನಾಂ ಸಪರ್ಯಾ, ತರ್ಪಣಂ, ಬಲಿಃ ಇದನ್ನು ಸ್ವೀಕರಿಸಬಹುದು)

**ನಾಲ್ಕೊಂದು ಇಂದ್ರಿಯಗಳ ಬಂಧನ ಮಾಡು** = ಪಂಚ ಜ್ಞಾನೇಂದ್ರಿಯಗಳ ಬಂಧನ ಮಾಡು.

**ನಾಲ್ಕೊಂದು ಹಾದಿಗೆ ಎರಗದಿರು** = ರೂಪ, ರಸ, ಗಂಧ, ಶಬ್ದ, ಸ್ಪರುಶಗಳಿಗೆ ಬಲಿಯಾಗದೆ.

**ನಾಲ್ಕೊಂದು ಅವರ ಪಾಲ** = ಮುಕ್ತರು, ಮುಕ್ತಿಯೋಗ್ಯರು, ನಿತ್ಯಸಂಸಾರಿ, ತಾಮಸರು, ತಮೋಯೋಗ್ಯರು ಎಂಬ ಐವರು ಅಸ್ವತಂತ್ರರನ್ನು ಪಾಲಿಸುವವನು.

**ನಾಲ್ಕೊಂದು ಬಿಡಿಸುವ ವಿಜಯವಿಠಲರೇಯ** = ಪಂಚಪಾತಕಗಳಿಂದ ಬಿಡಿಸಿ.

**ನಾಲ್ಕೊಂದು ಕೊಡುವನು** = ಪಂಚರೂಪಗಳಲ್ಲಿ ಒಂದಾದ ವಾಸುದೇವನ ದರ್ಶನ ಭಾಗ್ಯ ನೀಡುವನು.

**ಐದೊಂದು ರಿಪುಗಣ ಪ್ರತಿದಿನದಿ ಮುಗ್ಗಿಸು** = ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಷಡ್ರಿಪುಗಳನ್ನು ಬರದಂತೆ ತಡೆಯಬೇಕು.

**ಐದೊಂದು ಕರ್ಮವ ಮಾಡುತಿರು** = ಅಧ್ಯಯನ, ಅಧ್ಯಾಪನ, ಯಜನ-ಯಾಜನ, ದಾನ-ಪ್ರತಿಗ್ರಹವೆಂಬ ಷಟ್ಕರ್ಮ ನಿರತನಾಗಿರು.

**ಐದೊಂದು ಮತಕೆ ನಮ್ಮ ಮತ ಅಧಿಕವೆನ್ನು** = ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ ವೇದಾಂತಗಳಲ್ಲಿ ದ್ವೈತ ಮತವೇ ಶ್ರೇಷ್ಠವೆನ್ನು.

**ಐದೊಂದು ರುಚಿ ಬಿಡು ಹರಿನಾಮ ರುಚಿಯೆನ್ನು** = ಮಧುರ, ಹುಳಿ, ಉಪ್ಪು, ಕಟು, ಕಹಿ, ಒಗರು, ರಸಗಳಲ್ಲಿ ಹರಿನಾಮ ರಸವೇ ಉತ್ತಮರಸವೆಂದು ತಿಳಿ.

**ಐದೊಂದು ರಥಿಕರ ಜರಿದ ವಿಜಯ ವಿಠಲನ್ನ** = ಭೀಷ್ಮ, ದ್ರೋಣ, ಕೃಪ, ಕರ್ಣ, ಶಲ್ಯ, ಅಶ್ವತ್ಥಾಮರನ್ನು ಸಂಧಿಕಾಲದಲ್ಲಿ ಜರಿದು ವಿದುರನ ಮನೆಗೆ ಹೋದ ವಿಜಯವಿಠಲನ್ನ ಭಜಿಸು.

**ಐದೊಂದು ಸ್ಥಳಗಳಲ್ಲಿ ತಿಳಿದು ನಿರ್ಮಲನಾಗು** = ದೇಹದಲ್ಲಿರುವ ಆರು ಕಮಲಗಳಲ್ಲಿರುವ ಭಗವಂತನನ್ನು ತಿಳಿದು ನಿರ್ಮಲನಾಗು (ಮೂಲಾಧಾರ, ನಾಭಿ, ಹೃದಯ, ತುಂದಿ, ಕಂಠ, ಭ್ರೂಮಧ್ಯೆಯಿರುವ ಆರು ಕಮಲಗಳು.)

**ಆರೊಂದು ಜಡವುಳ್ಳ ಗ್ರಾಮ ನಿನ್ನದಲ್ಲ** = ಏಳು ತೊಗಟೆಗಳ ಸಮೂಹವಾದ ಈ ದೇಹ ಪರತಂತ್ರ.

**ಆರೊಂದು ಅಂಬುಧಿಯಷ್ಟು ಕರ್ಮ ನಿನ್ನದು** = ಸಪ್ತಸಮುದ್ರದಷ್ಟು ಕರ್ಮವಿದೆ. ಭಗವಂತನ ದಯೆ ಇಲ್ಲದೆ ಅನುಭವಿಸಲು ಸಾಧ್ಯವಿಲ್ಲ.

**ಆರೊಂದವರ ಕೇಳಿ ತಿಳಿದುಕೊಳ್ಳು** = ಆರೊಂದು = ಏಳು: ಏಳು ಎಂದರೆ ಸೂರ್ಯ = ಸೂರಿಗಳು, ಜ್ಞಾನಿಗಳನ್ನು ಕೇಳಿ ತಿಳಿದುಕೊಳ್ಳು.

**ಆರೊಂದು ದ್ವೀಪವಾಳಿದವರು** = ಸಪ್ತದ್ವೀಪಗಳನ್ನು ಆಳಿದ ಆಗ್ನೀಧ್ರ, ಇಧ್ಮ ಜಿಹ್ವಾದಿಗಳೂ ಆಳಿದರೆಂದು ಆರೊಂದು ಹಯನಕಾಲಕ್ಕೆ ತಿಳಿದು.

**ಆರೊಂದು ಕರ್ಮವ ಮಾಡು ಎದ್ದು** = ದಿನದ ಏಳನೆ ಯಾಮದಲ್ಲೆದ್ದು ಏಳು ಕರ್ಮ, ಸ್ನಾನ, ಸಂಧ್ಯಾಜಪ, ದೇವತಾರ್ಚನೆ, ಬ್ರಹ್ಮಯಜ್ಞ, ವೈಶ್ವದೇವ, ಬಲಿಹರಣ, ಅತಿಥಿಪೂಜೆ ಮಾಡುತ್ತಿರು.

ಆರೊಂದು ಜಿಹ್ವೆಗೆ ಉಣಿಸಬೇಕು = ಸಪ್ತಜಿಹ್ವೆಯುಳ್ಳ ಅಗ್ನಿಯಲ್ಲಿ ಹೋಮಿಸಬೇಕು.

ಆರೊಂದು ಗೋತ್ರ ಉದ್ಧಾರ ಮಾಡುವ = ಸ್ವಗೋತ್ರ, ತಂದೆಯ ಗೋತ್ರ, ತಾಯಿಯ ಗೋತ್ರ. (ಗೋತ್ರವೆಂದರೆ ವಂಶ ಎಂಬರ್ಥ) ತಮ್ಮನ ಗೋತ್ರ, ಅಣ್ಣನ ಗೋತ್ರ, ಮಗಳ ಗೋತ್ರ, ಮಗನ ಗೋತ್ರ. ಒಂದು ಮನೆಯಲ್ಲಿ ಭಗವದ್ಭಕ್ತನು ಒಬ್ಬನಿದ್ದರೂ, ಈ ಏಳುತಲೆ ಉದ್ಧಾರವಾಗುವುದು (ತಾನೂ ಸೋದರಮಾವ, ಚಿಕ್ಕಮ್ಮ ಚಿಕ್ಕಪ್ಪ ಭಾವಮೈದುನ, ತಂಗಿ, ಮಗಳು ಹೀಗೂ ಹೇಳಬಹುದು.)

ಆರೊಂದು ಅಂಗವುಳ್ಳ ವಿಜಯವಿಠಲ ಹರಿಯ = ಸಂವತ್ಸರ, ಅಯನ, ಋತು, ಮಾಸ, ಪಕ್ಷ, ವಾರ, ತಿಥಿಗಳೆಂಬ ಏಳು ಅಂಗಗಳುಳ್ಳ ಕಾಲನಿಯಾಮಕನಾದ ವಿಜಯವಿಠಲ ಹರಿಯ.

ಆರೊಂದು ವಾರದೊಳನಿಮಿಷದಾಸನಾಗು = ಭಾನುವಾಸರಾದಿ ಸಪ್ತ ದಿವಸಗಳಲ್ಲಿಯೂ ಅನಿಮಿಷನಾದ ಭಗವಂತನ ದಾಸನಾಗು.

ಏಳೊಂದು ಪಾಲಕರ ತಿಳಿ = ಅಷ್ಟ ದಿಕ್ಪಾಲಕರನ್ನೂ ನಿಯಮಿಸುವವನು ಭಗವಂತನೆಂದು ತಿಳಿ.

ಏಳೊಂದು ದಳದಲ್ಲಿ ಭಗವದ್ರೂಪ ತಿಳಿ = ಹೃದಯದ ಅಷ್ಟ ಕಮಲದ ತಳದಲ್ಲಿ ಮೂಲೇಶನನ್ನು ತಿಳಿ.

ಏಳೊಂದು ಮೂರ್ತಿಯ ಚಿಂತನೆ ಮಾಡು = ಕೃಷ್ಣ, ರಾಮ, ಸಿಂಹ, ವರಾಹ, ವಿಷ್ಣು ಪರಂಜ್ಯೋತಿ, ಪರಂಬ್ರಹ್ಮ ವಾಸುದೇವ ಇವು ಅಷ್ಟಮೂರ್ತಿಗಳು.

ಏಳೊಂದು ದಂತಿಗಳ ತಿಳಿದು = ಅಷ್ಟಮದಗಳೆಂಬ ಆನೆಗಳ ತಿಳಿದು. ಏಳೊಂದು ಭೂತಿಯುಳ್ಳ ವಿಜಯ ವಿಠಲನ ಮಹಿಮೆ ತಿಳಿ = ಅಣಿಮಾ, ಗರಿಮಾದಿ ಅಷ್ಟ ಸಿದ್ಧಿಯನ್ನು ನೀಡುವ ಮಹಿಮೆ ತಿಳಿ.

ಎಂಟೊಂದು ಗ್ರಹಗಳ ತಿಳಿಯಬೇಕು = ನವಗ್ರಹಗಳ ನಿಯಾಮಕ ಭಗವಂತನೆಂದು ತಿಳಿ: "ಸಕಲಗ್ರಹಬಲ ನೀನೇ" ಎಂದು.

ಎಂಟೊಂದು ಸೃಷ್ಟಿಯ ತಿಳಿಯಬೇಕು = ಮಹತತ್ತ್ವ, ಅಹಂಕಾರ, ಪಂಚಭೂತ, ಇಂದ್ರಿಯಸೃಷ್ಟಿ ಮನಸ್ಸಿನ ಸೃಷ್ಟಿ ತಮೋಗುಣ ಸೃಷ್ಟಿ ಸ್ಥಾವರ, ತಿರ್ಯಕ್, ಮಾನವ ಸೃಷ್ಟಿ

ಎಂಟೊಂದು ಪ್ರಜೇಶ್ವರರ ತಿಳಿಯಬೇಕು = ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ ಪ್ರಲಹ, ಕ್ರತು, ವಸಿಷ್ಠ

ಎಂಟೊಂದು ಕೋಟಿ ರೋಮಗಳಲ್ಲಿ = ನವಕೋಟಿ ರೋಮಗಳಲ್ಲಿ.

ಎಂಟೊಂದು ಶಕ್ತಿಯುಳ್ಳ = ವಿಮಲ, ಉತ್ಕರ್ಷಣೀ, ಜ್ಞಾನ, ಕ್ರಿಯಾ, ಯೋಗ, ಸತ್ಯ, ಪ್ರಾಹ್ವೀ, ಸತ್ಯಾ, ಈಶಾನಾ ಎಂಬ ನವಶಕ್ತಿಯುಳ್ಳ.

ಎಂಟೊಂದು ಕಡೆಯಲ್ಲಿರುವ ವಿಜಯವಿಠಲನ ಎಂಟು ಮೂರುತಿಗಳ ತಿಳಿಯಬೇಕು = ನವದ್ವೀಪಗಳಲ್ಲಿರುವ ಭಗವಂತನ ಉಪಾಸನಾ ರೂಪಗಳನ್ನು ತಿಳಿದು ಉಪಾಸಿಸಿದಲ್ಲಿ ಭಗವಂತ ಒಲಿದು ಉತ್ತಮ ಗತಿಯನ್ನು ಕೊಡುವ.

*